# EXAMINATION FOR RECRUITMENT TO THE POSTS OF DISTRICT JUDGES
ಜಿಲ್ಲಾ ನ್ಯಾಯಾಧೀಶರುಗಳ ಹುದ್ದೆಗಳಿಗೆ ನೇಮಕಾತಿ ಪರೀಕ್ಷೆ

## (CIVIL LAW)
### QUESTION PAPER
ಪ್ರಶ್ನೆ ಪತ್ರಿಕೆ

**12TH NOVEMBER, 2016**
ದಿನಾಂಕ 12ನೇ ನವೆಂಬರ್, 2016

**Max. Marks: 150**
ಗರಿಷ್ಠ ಅಂಕಗಳು: 150

**TIME: 10.00 am to 1.00 pm**
ಸಮಯ: ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ಘಂಟೆ

**INSTRUCTIONS TO CANDIDATES:**
ಅಭ್ಯರ್ಥಿಗಳಿಗೆ ಸೂಚನೆಗಳು

1) **It is compulsory for all the candidates to answer atleast one of the papers in English and in so far as the other paper is concerned, it shall be optional for the candidates to answer the same either in English or in Kannada.**

ಅಭ್ಯರ್ಥಿಗಳು ಖಡ್ಡಾಯವಾಗಿ ಒಂದು ಪ್ರಶ್ನೆ ಪತ್ರಿಕೆಯನ್ನು ಆಂಗ್ಲಭಾಷೆಯಲ್ಲಿ ಉತ್ತರಿಸಬೇಕು. ಉಳಿದ ಪ್ರಶ್ನೆ ಪತ್ರಿಕೆಯನ್ನು ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ವಿವೇಚನೆಗೆ ಬಿಡಲಾಗಿದೆ.

2) **If there is any discrepancy in the questions in English language and in Kannada language, the questions as framed in English language would prevail.**

ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ಲೋಪ ಕಂಡುಬಂದಲ್ಲಿ, ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ನಿರ್ಣಾಯಕವಾಗುವುದು.

1. (a) Whether Hindu Male and Female can marry under the Special Marriage Act, 1955? State the minimum age limit for bride and bridegroom and the procedure in a marriage under Special Marriage Act. **4**

ವಿಶೇಷ ವಿವಾಹ ಕಾಯ್ದೆ, 1955ರ ಅಡಿಯಲ್ಲಿ ಹಿಂದೂ ಮಹಿಳೆಯು ಮತ್ತು ಹಿಂದೂ ಪುರುಷನು ಮದುವೆ ಮಾಡಿಕೊಳ್ಳಬಹುದೇ? ಸದರಿ ಕಾಯ್ದೆ ಅಡಿಯಲ್ಲಿ ನಿಗದಿ ಪಡಿಸಿರುವ 'ಮದುವಣಿಗ' ಹಾಗೂ 'ಮದುವಣಗಿತ್ತಿ' ಕನಿಷ್ಠ ವಯೋಮಿತಿ ಹಾಗೂ ಸದರಿ ಕಾಯ್ದೆ ಅಡಿಯಲ್ಲಿ ವಿವಾಹಕ್ಕೆ ಸಂಬಂಧ ಪಟ್ಟಂತೆ ಪ್ರಕ್ರಿಯ ಕಾನೂನನ್ನು ತಿಳಿಸಿ.

(b) What do you mean by "Sapinda" relationship under Hindu Law? **2**

ಹಿಂದೂ ಕಾನೂನಿನ ಅಡಿಯಲ್ಲಿ "ಸಪಿಂಡ" ಸಂಬಂಧ ಎಂದರೇನು?

(c) What are the contributions of Vigneneshwara and Jeemoothavahana to Hindu Law? 2

ಹಿಂದೂ ಕಾನೂನಿಗೆ 'ವಿಜ್ಞಾನೇಶ್ವರ' ಹಾಗೂ 'ಜೀಮೂತವಾಹನರ' ಕೊಡುಗೆಗಳೇನು?

(d) Meera aged 50 years and Prakash aged 52 years are spouses. Veeresh, Dheeresh and Suresh are their sons. Kalpana and Soundarya are the daughters. All the sons and daughters of Meera and Prakash are married. When all of them were travelling from Ooty to Bangalore their car met with a ghastly accident and resulted in the death of Prakash and all his sons and daughters. Soundarya is survived by her daughter Kamala and Kalpana is survived by a son Prajwal. Veeresh is survived by a daughter Shanthi. After one year, Meera adopts Kumar aged 9 years and Arpita aged 7 years. Examine the validity or invalidity of the adoptions. What is the law relating to cancellation of adoption. 4

50 ವರ್ಷ ವಯಸ್ಸಿನ ಮೀರ ಹಾಗೂ 52 ವರ್ಷಗಳ ಪ್ರಕಾಶ್ ರವರುಗಳು ದಂಪತಿಗಳು ಅವರಿಗೆ ವಿರೇಶ, ದಿರೇಶ ಮತ್ತು ಸುರೇಶ ಎಂಬ ಮೂರು ಗಂಡು ಮಕ್ಕಳು ಹಾಗೂ ಕಲ್ಪನ ಮತ್ತು ಸೌಂದರ್ಯ ಎಂಬ ಹೆಣ್ಣು ಮಕ್ಕಳು. ಮೀರ ಮತ್ತು ಪ್ರಕಾಶ್ ರವರ ಎಲ್ಲಾ ಮಕ್ಕಳು ವಿವಾಹಿತರು ಎಲ್ಲರು ಊಟಿಯಿಂದ ಬೆಂಗಳೂರು ಕಡೆಗೆ ಕಾರನಲ್ಲಿ ಬರುತ್ತಿರಲು ಉಗ್ರ ಅಪಘಾತಕ್ಕೆ ಸಿಲುಕಿದರ ಪರಿಣಾಮವಾಗಿ ಪ್ರಕಾಶ ಅವನ ಎಲ್ಲಾ ಗಂಡು ಹಾಗೂ ಹೆಣ್ಣು ಮಕ್ಕಳು ತೀರಿಕೊಳ್ಳುತ್ತಾರೆ. ಕಮಲ ಎಂಬುವಳು ಸೌಂದರ್ಯಳ ಮಗಳು ಪ್ರಜ್ವಲ್ ಎಂಬುವನು ಕಲ್ಪನಾಳ ಮಗ ವಿರೇಶನಿಗೆ ಶಾಂತಿ ಎಂಬ ಒಬ್ಬ ಹೆಣ್ಣು ಮಗಳು ಇರುತ್ತಾರೆ ಒಂದು ವರ್ಷದ ನಂತರ ಮೀರಾಳು 9 ವರ್ಷದ ಕುಮಾರ್ ಎಂಬ ಬಾಲಕನನ್ನು ಹಾಗೂ 7 ವರ್ಷದ ಅರ್ಪಿತ ಎಂಬ ಹೆಣ್ಣು ಮಗುವನ್ನು ದತ್ತು ಪಡೆಯುತ್ತಾಳೆ. ಮೇಲ್ಕಂಡ ದತ್ತುಗಳ ಕಾನೂನು ಬದ್ಧತೆ ಅಥವಾ ಬಾಹಿರತೆಯನ್ನು ತಿಳಿಸಿ. ದತ್ತು ರದ್ದಿಯಾತಿಯ ಬಗ್ಗೆ ಕಾನೂನನ್ನು ತಿಳಿಸಿ.

2. (a) State the meaning of the following 'Talaq-ul-hasan', 'Talaq-ul-bidai' or 'Talaq-ul-bidat' and 'Marz-ul-Maut' 3

'ತಲಾಖ್-ಉಲ್-ಹಸನ್', 'ತಲಾಖ್-ಉಲ್-ಬಿದಾಯ್' ಅಥವಾ 'ತಲಾಖ್-ಉಲ್-ಬಿದತ್' ಮತ್ತು 'ಮರ್ಜ-ಉಲ್-ಮೌತ್' ಅರ್ಥಗಳನ್ನು ತಿಳಿಸಿ.

(b) A Mohammeden with huge estate dies leaving behind his wife, two sons and three daughters. Calculate the shares available to the said legal heirs under the Hanafi Law on intestate succession. 4

ಒಬ್ಬ ಮುಸ್ಲಿಂ ವ್ಯಕ್ತಿಯು ಅಪಾರ ಆಸ್ತಿಯನ್ನು ಹೊಂದಿದ್ದು, ತನ್ನ ಹೆಂಡತಿ ಇಬ್ಬರು ಗಂಡು ಮಕ್ಕಳು ಮತ್ತು ಮೂರು ಹೆಣ್ಣು ಮಕ್ಕಳನ್ನು ಅಗಲಿ ನಿಧನ ಹೊಂದುತ್ತಾನೆ. ಹನಾಫಿ ಉಯಿಲೇತರ ವಾರಸುದಾರತ್ವದ ಕಾನೂನಿನ ಪ್ರಕಾರ ಅವನ ವಾರಸುದಾರರ ಪಾಲುಗಳಿಗೆ ಬರುವ ಆಸ್ತಿಯ ಭಾಗಗಳನ್ನು ಲೆಕ್ಕ ಮಾಡಿ ತಿಳಿಸಿ.

(c) State the Hanafi Law relating to 'Wasiat' (will) by examining bequeathable third and 'Wasiat' in favour of legal heirs. 4

ಹನಾಫಿ ಕಾನೂನಿನ ಪ್ರಕಾರ 'ವಸಿಯತ್' (ಉಯಿಲು) ಬಗ್ಗೆ ಇರುವ ಮೂರನೇ ಒಂದು ಭಾಗದ ಹಕ್ಕು ಮತ್ತು ವಾರಸುದಾರರಿಗೆ ಉಯಿಲು ಮಾಡಿದಾಗ ಇರುವ ಕಾನೂನಿನ ಬಗ್ಗೆ ತಿಳಿಸಿ.

(d) Mention the meaning of "prompt mahr" and "deferred mahr" with reference to the stage of payment. **2**

ಹನಾಫಿ ಕಾನೂನಿನ ಪ್ರಕಾರ ಪ್ರಾಂಪ್ಟ್, ಮತ್ತು ಡೆಫರ್ಡ್ ಮೆಹರ್‌ಗಳ ಅರ್ಥ ಹಾಗೂ ಅವುಗಳ ಪಾವತಿಯ ಹಂತಗಳನ್ನು ತಿಳಿಸಿ.

3. (a) Briefly discuss on the following: **4**
   (i) Issues in facts and facts in issue; and
   (ii) Question of law and question of fact.

ಕೆಳಗಿನವುಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ:
   (ಅ) ವಾಸ್ತವಾಂಶಗಳಲ್ಲಿ ವಿವಾದಾಂಶಗಳು ಮತ್ತು ವಿವಾದಾಂಶಗಳಲ್ಲಿ ವಾಸ್ತವಾಂಶಗಳು
   (ಆ) ಕಾನೂನಿನ ಪ್ರಶ್ನೆ ಮತ್ತು ವಾಸ್ತವಾಂಶದ ಪ್ರಶ್ನೆ

(b) Materials on which issues may be framed under Order XIV, Rule 3 CPC **2**

ನಾಗರಿಕ ಪ್ರಕ್ರಿಯ ಸಂಹಿತೆ ಕ್ರಮಾದೇಶ 14 ನಿಯಮ 3ರ ಅಡಿಯಲ್ಲಿ ವಿವಾದಾಂಶಗಳನ್ನು ಸಿದ್ಧಪಡಿಸುವ ವೇಳೆ ಗಮನಿಸಬೇಕಾದ ಅಂಶಗಳು.

(c) The limitation once starts moving, there cannot be signals to stop it. However, there are certain occasions wherein certain periods are treated as grace. Discuss with reference to exclusion of time (Under Sections12 to 17) and significance of Section 5 of the Limitation Act 1963. **8**

ಒಮ್ಮೆ ಕಾಲಮಿತಿಯು ಚಲಿಸಲು ಪ್ರಾಂಭಿಸಿದರೆ ಅದನ್ನು ನಿಲ್ಲಿಸುವ ಸಂಕೇತಗಳಿಲ್ಲ. ಆದರೂ, ಕೆಲವು ಸಂದರ್ಭಗಳು ನಿರ್ದಿಷ್ಠ ರಿಯಾಯಿತಿ ಅವಧಿಗಳನ್ನು ನೀಡುತ್ತವೆ ಅದರಂತೆ ಕಾಲನಿಯಮಿತಿ ಕಾಯ್ದೆ 1963ರ ಕಲಂ 12 ರಿಂದ 17ರಲ್ಲಿ ಅವಧಿ ರಿಯಾಯಿತಿಗಳ ಬಗ್ಗೆ ಮತ್ತು ಕಲಂ 5ರ ಔಚಿತ್ಯಗಳನ್ನು ತಿಳಿಸಿ.

(d) When an order of attachment before judgment is made under Order XXXVIII Rule 5 of CPC, what is the impact of Rule 10 of the same order. **2**

ನಾಗರಿಕ ಪ್ರಕ್ರಿಯ ಸಂಹಿತೆಯ ಕ್ರಮಾದೇಶ 38 ನಿಯಮ 5ರ ಅಡಿಯಲ್ಲಿ ಮಾಡಿದ ತೀರ್ಪಿನ ಪೂರ್ವದ ಮುಟ್ಟುಗೋಲು ಆದೇಶದ ಮೇಲೆ ಸದರಿ ಕ್ರಮಾದೇಶದ 10ನೇ ನಿಯಮವು ಯಾವ ರೀತಿಯ ಪರಿಣಾಮವನ್ನು ಬೀರುತ್ತದೆ.

4. (a) State the law relating to decree in pre-emption suit under Order XX Rule 14 CODE OF CIVIL PROCEDURE **3**

ನಾಗರಿಕ ಪ್ರಕ್ರಿಯ ಸಂಹಿತೆ ಕ್ರಮಾದೇಶ 20 ನಿಯಮ 14ರ ಪ್ರಕಾರ ಮೊದಲು ಕೊಳ್ಳುವ ಹಕ್ಕಿನ ದಾವೆಯಲ್ಲಿ ಡಿಕ್ರಿಯ ಬಗ್ಗೆ ಇರುವ ಕಾನೂನನ್ನು ತಿಳಿಸಿ.

(b) Mention the date of cause of action for filing a suit claiming the right of pre-emption, with reference to sale agreement of the subject matter by a person against whom pre-emption is claimed. **3**

ಕ್ರಯದ ಕರಾರನ್ನು ಗಣನೆಗೆ ತೆಗೆದುಕೊಂಡು "ಮೊದಲು ಕೊಳ್ಳುವ ಹಕ್ಕಿಗಾಗಿ" ದಾವೆಯ ಹಕ್ಕಿನೊಳಗೊಂಡಂತೆ ದಾವೆ ಹೂಡುವ ಹಕ್ಕಿನ ದಿನಾಂಕವನ್ನು ತಿಳಿಸಿ.

(c) State the meaning of the terms 'pro-forma defendant' and 'pocket defendant'? **2**

'ನಿರ್ದೇಶನಾರ್ಥ ಪ್ರತಿವಾದಿ' ಹಾಗೂ 'ಪಾಕೆಟ್ ಪ್ರತಿವಾದಿ'ಗಳ ಅರ್ಥವನ್ನು ತಿಳಿಸಿ.

(d) Briefly state the similarities between 'counterclaim' in a suit and 'application for alimony' by the wife in a case filed by her husband for divorce. What is the effect of dismissal for default of the case filed by the husband? **4**

ದಾವೆಯಲ್ಲಿನ 'ಎದುರು ದಾವೆ' ಮತ್ತು ವಿಚ್ಛೇದನಕ್ಕಾಗಿ ಗಂಡನು ಹೂಡಿರುವ ದಾವೆಯಲ್ಲಿ ವಾದಕರ ಜೀವನಾಂಶಕ್ಕೆ ಹೆಂಡತಿ ಸಲ್ಲಿಸಿದ ಅರ್ಜಿಯ ಅಂತರದಲ್ಲಿ ಇರುವ ಸಮಾನತೆಗಳನ್ನು ತಿಳಿಸಿ. ಗಂಡ ಹೂಡಿರುವ ದಾವೆ ಕರ್ತವ್ಯ ಲೋಪಕ್ಕಾಗಿ ವಜಾ ಆದಾಗ ಪರಿಣಾಮವೇನು.

(e) What is the legal position in respect of judgment on admissions under Order XII Rule 6 of the Code Of Civil Procedure. **2**

ನಾಗರಿಕ ಪ್ರಕ್ರಿಯ ಸಂಹಿತೆ ಕ್ರಮಾದೇಶ 12 ನಿಯಮ 6ರ ಅಡಿಯಲ್ಲಿ ಒಪ್ಪಿಕೊಂಡಿರುವ ಅಂಶಗಳ ಪ್ರಕಾರ ತೀರ್ಪಿನ ಬಗ್ಗೆ ಇರುವ ಕಾನೂನನ್ನು ತಿಳಿಸಿ.

5. (a) Briefly discuss the nature of The Indian Constitution as to whether it is exclusively 'Federal or Unitary', with reference Article 356, State List and the Union List. **8**

ಭಾರತ ಸಂವಿಧಾನದ ಅನುಚ್ಛೇದ 356ರ ಮತ್ತು ಸಂವಿಧಾನದ ಕೇಂದ್ರ ಪಟ್ಟಿ ಮತ್ತು ರಾಜ್ಯ ಪಟ್ಟಿಗಳನ್ನು ಗಣನೆಗೆ ತೆಗೆದುಕೊಂಡು ಭಾರತ ಸಂವಿಧಾನವು 'ಫೆಡರಲ್ಲ್ ಅಥವಾ ಯೂನಿಟರಿ'ಯ ಸ್ವರೂಪದ್ದೇ ಎಂಬುದನ್ನು ಚರ್ಚಿಸಿ.

(b) What are the contributions of American and Irish constitution to the Indian Constitution **3**

ಭಾರತದ ಸಂವಿಧಾನಕ್ಕೆ ಅಮೆರಿಕಾ ಹಾಗೂ ಐರ್‌ಲ್ಯಾಂಡ್ ಸಂವಿಧಾನಗಳ ಕೊಡುಗೆ ಏನು?

(c) When 'Bill' becomes a central Act? State with reference to ordinary bill and money bill and also mention the recent bill which became a Central act. **8**

'ವಿದೇಯಕವು' ಕೇಂದ್ರ ಕಾಯ್ದೆ ಆಗುವ ಬಗೆಯನ್ನು ಸಾಧಾರಣ ವಿದೇಯಕ ಮತ್ತು ಆರ್ಥಿಕ ವಿದೇಯಕಗಳನ್ನು ಉಲ್ಲೇಖಗಳನ್ನು ತಿಳಿಸಿ ಮತ್ತು ಇತ್ತಿಚೆಗೆ ಕೇಂದ್ರ ಕಾಯಿದೆಯಾದ ವಿದೇಯಕ ಯಾವುದು.

6. (a) Mention the legal differences among offer, prospectus and tender. **2**

"ಕೊಡಮಾಡುವಿಕೆ" "ವಿವರಣಾ ಪತ್ರ" ಮತ್ತು "ಟೆಂಡರ್"ಗಳ ಮಧ್ಯೆ ಇರುವ ಕಾನೂನಿನ ಅಂತರಗಳನ್ನು ತಿಳಿಸಿ.

(b) What do you mean by "attempted performance and anticipatory breach of contract" in relation to performance of contracts? **3**

ಪ್ರಯತ್ನಿಸಿದ ಪರಿಪಾಲನೆ ಮತ್ತು ಒಪ್ಪಂದದ ನಿರೀಕ್ಷಣಾ ಭಂಗ ಅಂದರೇನು?

7. (a) 'It is not possible to identify all kinds of activities to pre-define them as agreements enforceable by law, however, an agreement enforceable by law is a contract. Non-contracting parties shall also bear obligations in certain cases.' Examine the above statement and mention two such instances of obligations sans earlier contract. **4**

ಎಲ್ಲಾ ತರಹದ ಚಟುವಟಿಕೆಗಳನ್ನು ಪೂರ್ವದಲ್ಲಿ ಗುರುತಿಸಲ್ಪಟ್ಟು ಕಾನೂನಿನ ಮಾನ್ಯತೆಗೆ ಒಳಗಾದ ಒಪ್ಪಿಗೆಗಳು ಮತ್ತು ಒಪ್ಪಂದಪೂರ್ವ ಒಪ್ಪಿಗೆ ಎಂದು ಹೇಳಲಾಗದು. ಆದರೂ, ಕಾನೂನಿನಿಂದ ಗುರುತಿಸಲ್ಪಟ್ಟ ಒಪ್ಪಿಗೆಗಳು ಒಪ್ಪಂದವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಒಪ್ಪಂದಕ್ಕೆ ಸದಸ್ಯರಲ್ಲದವರು ಒಪ್ಪಂದದ ಭಾದ್ಯತೆಗಳನ್ನು ಹೊರಬೇಕಾಗುತ್ತದೆ. ಮೇಲೆ ಹೇಳಿದ ಸಂದರ್ಭಗಳಲ್ಲಿ ಎರಡು ದೃಷ್ಟಾಂತಗಳನ್ನು ನೀಡಿ ಪೂರ್ವ ಒಪ್ಪಂದವಿಲ್ಲದೆ ಭಾದ್ಯತೆಗೊಳಗಾಗುವ ಎರಡು ಸಂದರ್ಭಗಳನ್ನು ತಿಳಿಸಿ.

(b) Ananda and Mukunda are neighbours but, each does not like the other. One day fire broke out in the house of Ananda. Mukunda forgetting the enemity and the safety of his life saves Ananda from fire. As a good gesture, Ananda promises Mukunda to give a gold ring of 5 grams. Next day, after consulting his wife, he backs out of his promise, stating that his promise was without consideration. In the above circumstance, examine the legal position. **3**

ಆನಂದ ಮತ್ತು ಮುಕುಂದ ನೆರೆ–ಹೊರೆಯವರು ಆದರೆ, ಒಬ್ಬರನ್ನೊಬ್ಬರು ಇಷ್ಟ ಪಡುವುದಿಲ್ಲ. ಒಂದು ದಿನ ಆನಂದನ ಮನೆಯಲ್ಲಿ ಬೆಂಕಿ ಅಪಘಾತವಾಗುತ್ತದೆ. ಮುಕುಂದನು ವೈರತ್ವವನ್ನು ಮರೆತು ಆನಂದನನ್ನು ಕಾಪಾಡುತ್ತಾನೆ. ಆನಂದನು ಒಳ್ಳೆ ಭಾವನೆಯಿಂದ ಮುಕುಂದನಿಗೆ ಒಂದು 5 ಗ್ರಾಮ್‌ನ ಬಂಗಾರದ ಉಂಗುರವನ್ನು ಕೊಡುವುದಾಗಿ ವಾಗ್ದಾನ ಮಾಡುತ್ತಾನೆ, ಮರುದಿನ ತನ್ನ ಹೆಂಡತಿಯೊಂದಿಗೆ ವಿಮರ್ಶಿಸಿ ವಾಗ್ದಾನದಿಂದ ಹಿಂದೆ ಹೋಗಿ ತನ್ನ ವಾಗ್ದಾನವು ಪ್ರತಿಫಲರಹಿತವಾದದ್ದು ಎಂದು ಹೇಳಿ ವಾಗ್ದಾನದಿಂದ ಹಿಂದೆ ಹೋಗುತ್ತಾನೆ. ಇದಕ್ಕೆ ಸಂಬಂಧಪಟ್ಟ ಕಾನೂನಿನ ಅಂಶವನ್ನು ತಿಳಿಸಿ.

(c) Rajendra agrees to sell hundred bales of cotton to Devendra at a price to be fixed by Nagendra. Secondly Rajendra offers his great dane dog to Devendra for Rs.10,000/-. Devendra accepts the offer with a condition that Rajendra should buy his German Shepherd Dog for Rs.5,000/-. Examine the legal positions. 4

ರಾಜೇಂದ್ರನು ದೇವೇಂದ್ರನಿಗೆ ನೂರು ಬೇಲ್‌ಗಳ ಹತ್ತಿಯನ್ನು ನಾಗೇಂದ್ರನು ನಿಗದಿ ಪಡಿಸುವ ಬೆಲೆಗೆ ಕೊಡಲು ಕೊಡಮಾಡುತ್ತಾನೆ. ಎರಡನೆಯದಾಗಿ ರಾಜೇಂದ್ರನು ತನ್ನ ಗ್ರೇಟ್ ಡೇನ್ ನಾಯಿಯನ್ನು ರೂ.10,000/- ಬೆಲೆಗೆ ದೇವೇಂದ್ರನಿಗೆ ಕೊಡಮಾಡು ಮಾಡಲು ಹೇಳುತ್ತಾನೆ. ದೇವೇಂದ್ರನು ತನ್ನಲ್ಲಿರುವ ಜರ್ಮನ್ ಷೆಫರ್ಡ್ ನಾಯಿಯನ್ನು ರೂ.5,000/- ಗಳಿಗೆ ರಾಜೇಂದ್ರನು ಕೊಂಡಲ್ಲಿ ತಾನು ರಾಜೇಂದ್ರನ ಗ್ರೇಟ್ ಡೆನ್ ನಾಯಿಯ ಕೊಡಮಾಡುವಿಕೆಯನ್ನು ಒಪ್ಪುವುದಾಗಿ ಹೇಳುತ್ತಾನೆ. ಕಾನೂನಿನ ಅಂಶಗಳನ್ನು ವಿಶ್ಲೇಷಿಸಿ.

8. (a) "Foreclosure" is a right and "Tacking" is a check and prohibited as well. Examine the same with reference to a circumstance that when the maximum mortgage money agreed between the mortgagor and the first mortgagee, is three times the first mortgage money. 5

"ಫೋರ್‌ಕ್ಲೋಷರ್" ಎಂಬುವುದು ಹಕ್ಕು ಮತ್ತು "ಟ್ಯಾಕಿಂಗ್" ಎನ್ನುವುದು ಒಂದು ತಡೆ ಮತ್ತು ಅದನ್ನು ನಿಷೇಧಿಸಲಾಗಿದೆ. ಈ ಹಿನ್ನಲೆಯಲ್ಲಿ ಅಡಮಾನದ ಗರಿಷ್ಠ ಮೊತ್ತವನ್ನು ಮೊದಲನೆ ಅಡಮಾನಕಾರನು ಮತ್ತು ಅಡಮಾನ ಇಡುವವನು ಒಪ್ಪಿಕೊಂಡಿದ್ದು ಸದರಿ ಗರಿಷ್ಠ ಮೊತ್ತವು ಮೊದಲನೇ ಅಡಮಾನದ ಹಣಕ್ಕಿಂತ ಮೂರು ಪಟ್ಟು ಹೆಚ್ಚಾಗುವ ಸಂದರ್ಭದಲ್ಲಿ ಕಾನೂನಿನ ಉಪಲಬ್ಧತೆ ಏನು?

(b) The concept of marshalling applies for both mortgage and a sale but they maintain the difference in their applicability. Examine the same. 2

ಮಾರ್ಷಲಿಂಗ್ ತತ್ವವು ಅಡಮಾನ ಮತ್ತು ಕ್ರಯಗಳಿಗೆ ಒಪ್ಪಿದರು ತಮ್ಮದೆ ಆದ ವೆತ್ಯಾಸ ಹೊಂದಿರುತ್ತದೆ. ವಿಶ್ಲೇಷಿಸಿ.

(c) When does marshalling prevails over contribution? 3

ಮಾರ್ಷಲಿಂಗ್ ತತ್ವವು ಕೊಡುಗೆಯ ಮೇಲೆ ಅಧಿಪತ್ಯ ಸಾಧಿಸುವುದು ಯಾವಾಗ?

(d) Briefly state the applicability or non applicability of section 5 of The Transfer of Property Act 1882 to 'will', 'partition' and a 'gift' by assigning your reasons for your stand. 4

'ಉಯಿಲು', 'ವಿಭಾಗ' ಮತ್ತು 'ದಾನ'ಗಳಿಗೆ ಸ್ವತ್ತುಗಳ ಪರಭಾರೆ ಕಾಯಿದೆ 1882 ಕಲಂ 5ರ ಅನ್ವಯವಾಗುವಿಕೆ ಅಥವಾ ಅನ್ವಯವಾಗದಿರುವಿಕೆ ಗಳಿಗೆ ಸಮರ್ಥನೆ ನೀಡಿ ನಿಮ್ಮ ನಿಲುವನ್ನು ಸಮರ್ಥಿಸಿ.

9. (a) In a suit for specific performance the defendant takes up the stand that the plaintiff is not an agriculturist and he is debarred from 2

purchasing the suit land in question. Ultimately, the defendant establishes that he was growing coffee over the suit lands. Discuss the legal position.

ನಿರ್ದಿಷ್ಟ ಪರಿಪಾಲನ ದಾವೆಯಲ್ಲಿ ಪ್ರತಿವಾದಿಯು, ವಾದಿಯು ವ್ಯವಸಾಯಗಾರನಲ್ಲ ಮತ್ತು ದಾವೆಯ ಭೂಮಿಯನ್ನು ಖರೀದಿಸಲು ಅವನಿಗೆ ಯಾವುದೇ ಅರ್ಹತೆಯಿಲ್ಲ ಎಂಬ ನಿಲುವನ್ನು ಹೊಂದಿರುತ್ತಾನೆ. ಅಂತಿಮವಾಗಿ ಪ್ರತಿವಾದಿಯು ದಾವೆಯ ಭೂಮಿಯ ಮೇಲೆ ಕಾಫಿ ಬೆಳೆಯನ್ನು ಬೆಳೆಯುತ್ತಿದ್ದುದಾಗಿ ರುಜುವಾತು ಪಡಿಸುತ್ತಾನೆ. ಸಂಬಂಧಪಟ್ಟ ಕಾನೂನನ್ನು ಚರ್ಚಿಸಿ.

(b) 'Ramappa' sells 2 acres of land bearing survey No.40 at Attibele to Rajanna for Rs.2 lakh on 6.6.2016 through a registered sale deed and Rajanna issues a cheque bearing No.4466 drawn on State Bank of India for Rs.2 lakh on the same date to Ramappa. On presentation, the cheque gets dishonoured for want of sufficient funds in the bank account of Rajanna. Thus Rajanna fails to pay the agreed consideration for the land. Ramappa initiates proceedings under section 138 of the Negotiable Instruments Act 1882 and also files a suit for cancellation of the sale deed on the ground of want of consideration. Briefly explain law in this connection. **3**

ರಾಮಪ್ಪನು ತನ್ನ ಅತ್ತಿಬೆಲೆ ಗ್ರಾಮದ ಸರ್ವೆ ನಂ40 ರ ಬಾಬ್ತು ತನ್ನ ಎರಡು ಎಕರೆ ಜಮೀನನ್ನು ರಾಜಣ್ಣನಿಗೆ ರೂ.2 ಲಕ್ಷ ರುಪಾಯಿಗಳಿಗೆ ನೊಂದಣಿ ಕ್ರಯ ಪತ್ರದ ಮೂಲಕ ಮಾರಾಟ ಮಾಡುತ್ತಾನೆ. ರಾಜಣ್ಣನು ಕ್ರಯಕ್ಕೆ ಪ್ರತಿಫಲವಾಗಿ ಕ್ರಯ ಪತ್ರದ ನೊಂದಣಿ ದಿನಾಂಕದಂದು ರೂ.2 ಲಕ್ಷ ಮೌಲ್ಯದ 4466ರ ಸಂಖ್ಯೆವುಳ್ಳ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಚೆಕ್ಕನ್ನು ಬರೆದು ರಾಮಪ್ಪನಿಗೆ ನೀಡುತ್ತಾನೆ. ಆದರೆ ಆ ಚೆಕ್ಕು ಆದರೆ ಹಣ ಬಿಡುಗಡೆಗಾಗಿ ಚೆಕ್ಕನ್ನು ಬ್ಯಾಂಕಿಗೆ ಸಲ್ಲಿಸಿದಾಗ ರಾಜಣ್ಣನ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂದು ಅಮಾನ್ಯವಾಗುತ್ತದೆ. ರಾಮಪ್ಪನು ರಾಜಣ್ಣನ ಮೇಲೆ ವರ್ಗಾವಣೆಯ ಲಿಖಿತ ಪತ್ರಗಳ ಕಾಯಿದೆ 1882 ಕಲಂ 138ರ ಅಡಿಯಲ್ಲಿ ರಾಜಣ್ಣನ ವಿರುದ್ಧ ಫಿರ್ಯಾದು ದಾಖಲಿಸುತ್ತಾನೆ ನಂತರ ಪ್ರತಿಫಲವಿಲ್ಲದ ಕ್ರಯ ಪತ್ರವೆಂದು ಮತ್ತು ಸದರಿ ದಾಖಲೆಯೆಂದು ಅದನ್ನು ರದ್ದು ಪಡಿಸಲು ರಾಜಣ್ಣನ ವಿರುದ್ಧ ನ್ಯಾಯಾಲಯದಲ್ಲಿ ಫಿರ್ಯಾದು ಸಲ್ಲಿಸುತ್ತಾನೆ. ಸಂಕ್ಷಿಪ್ತವಾಗಿ ಈ ಸಂಬಂಧದ ಅಂಶಗಳಿಗೆ ಇರುವ ಕಾನೂನಿನ ಅಂಶಗಳನ್ನು ತಿಳಿಸಿ.

(c) Kiran files a suit against Charan at Sandur Court for declaration of title and consequential relief of permanent injunction over a vacant site in the limits of Sandur. Charan fails to attend the Court deliberately. He is set ex-parte by the Court and finally the suit is decreed ex-parte. Charan files an application under Order IX Rule 13 of CPC. The said application is also dismissed. Charan prefers an appeal against both the orders of placing him ex-parte and suit being decreed ex-parte. Do you concur with the legal advise and the steps taken by Charan of preferring appeal against both the orders. **4**

ಸಂಡೂರಿನಲ್ಲಿರುವ ಒಂದು ಖಾಲಿ ನಿವೇಶನದ ಮೇಲೆ ತನ್ನ ಒಡೆತನ ಘೋಷಣೆ ತತ್ಪರಿಣಾಮದ ಶಾಶ್ವತ ನಿರ್ಭಂದಕಾಜ್ಞೆಗಾಗಿ ಸಂಡೂರಿನ ನ್ಯಾಯಾಲಯದಲ್ಲಿ ಕಿರಣನು ಚರಣನ ಮೇಲೆ ಒಂದು ದಾವೆಯನ್ನು

ಹೂಡುತ್ತಾನೆ. ಚರಣನು ನ್ಯಾಯಾಲಯಕ್ಕೆ ಹಾಜರಾಗಲು ಉದ್ದೇಶಪೂರ್ವಕವಾಗಿ ವಿಫಲನಾಗುತ್ತಾನೆ. ತತ್ಪರಿಣಾಮವಾಗಿ ದಾವೆಯು ಏಕಪಕ್ಷೀಯವಾಗುತ್ತದೆ. ನಂತರ ದಾವೆಯು ಏಕಪಕ್ಷೀಯವಾಗಿ ಕಿರಣನ ಪರವಾಗಿ ನ್ಯಾಯಾಲಯವು ದಾವೆಯನ್ನು ಡಿಕ್ರಿ ಮಾಡುತ್ತದೆ. ನಂತರ ಚರಣನು ನಾಗರೀಕ ಪ್ರಕ್ರಿಯ ಸಂಹಿತೆ ಕ್ರಮಾದೇಶ 9 ನಿಯಮ 13ರ ಅಡಿಯಲ್ಲಿ ಒಂದು ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತಾನೆ. ಸದರಿ ಅರ್ಜಿಯನ್ನು ಸಹ ನ್ಯಾಯಾಲಯವು ವಜಾ ಮಾಡುತ್ತದೆ. ಚರಣನು ಏಕಪಕ್ಷೀಯ ಆದೇಶ ಮತ್ತು ಏಕಪಕ್ಷೀಯ ಡಿಕ್ರಿ ವಿರುದ್ಧ ಮೇಲ್ಮನವಿ ಸಲ್ಲಿಸುತ್ತಾನೆ. ನಿಮ್ಮ ವತಿಯಿಂದ ಚರಣನು ತೆಗೆದುಕೊಂಡು ನಿರ್ಧಾರದ ಬಗ್ಗೆ ಕಾನೂನು ಸಲಹೆ ಏನು?

(d) What is the extent of personal interest of Plaintiff over the subject matter in an interpleader suit? Give two examples of Interpleader suits. **2**

ಅಂತರ್ವಾದ ದಾವೆಗಳಲ್ಲಿ ದಾವಾ ಸ್ವತ್ತಿನ ಮೇಲೆ ವಾದಿಗೆ ಇರುವ ವೈಯಕ್ತಿಕ ಹಿತಾಸಕ್ತಿ ಎಷ್ಟು? ಎರಡು ಅಂತರ್ವಾದ ದಾವೆಗಳ ಉದಾಹರಣೆಗಳನ್ನು ನೀಡಿ.

10 (a) On 1-1-2012, Krishna files a suit for permanent injunction against Rama in respect of a residential site No. 14 at Magadi, to restrain the latter from proceeding with construction over the said site claiming that Rama has entered into an agreement on 1-12-2011 agreeing to sell the said site for Rs.20,00,000/- to Krishna and received an advance amount of Rs. 2 lakh from Krishna thereby agreeing to execute the registered sale deed at anytime on demand by Krishna provided balance consideration is paid. In the written statement dated 1-2-2012 Rama denies execution of sale agreement and further contends that Krishna has played fraud. After the trail the case is posted for judgment to be pronounced on 25-6-2016. On 15-6-2016, Krishna files a suit for specific performance against Rama in respect of the said sale agreement regarding site No. 14 of Magadi. Discuss the legal position. **6**

ಕೃಷ್ಣನು ರಾಮನ ವಿರುದ್ಧ ತಾರೀಖು 1.1.2012 ರಂದು, ದಾವೆಯನ್ನು ಹೂಡಿ ಮಾಗಡಿಯ 14ನೇ ಸಂಖ್ಯೆಯುಳ್ಳ ನಿವೇಶನವನ್ನು ತನಗೆ ರಾಮನು 20 ಲಕ್ಷ ರೂಪಾಯಿಗಳಿಗೆ ಕ್ರಯಕ್ಕೆ ಕೊಡಲು ಒಪ್ಪಿ ಮುಂಗಡವಾಗಿ ರೂ 2 ಲಕ್ಷ ರುಪಾಯಿಗಳನ್ನು ಪಡೆದು, ಉಳಿದ ಪ್ರತಿಫಲವನ್ನು ರಾಮನು ಕೇಳಿದಾಗ ಕೊಡಬೇಕೆಂದು 1.12.2011ರಂದು ಒಂದು ಕ್ರಯದ ಕರಾರು ರಾಮನು ಬರೆದು ಕೊಟ್ಟಿರುವುದರಿಂದ ಸದರಿ ನಿವೇಶನದ ಮೇಲೆ ರಾಮನು ಯಾವುದೇ ರೀತಿಯ ಕಟ್ಟಡ ನಿರ್ಮಾಣ ಕಾರ್ಯ ಮಾಡಬಾರದೆಂದು ರಾಮನ ವಿರುದ್ಧ ಶಾಶ್ವತ ನಿರ್ಭಂದಕಾಜ್ಞೆಗಾಗಿ ದಾವೆಯನ್ನು ಹೂಡಿರುತ್ತಾನೆ. ರಾಮನು 1.2.2012 ರಂದು ತನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿ ಕ್ರಯದ ಕರಾರನ್ನು ನಿರಾಕರಿಸಿ ಕೃಷ್ಣನು ತನಗೆ ವಂಚನೆ ಮಾಡಿದನೆಂದು ಹೇಳುತ್ತಾನೆ. ಪ್ರಕರಣದ ವಿಚಾರಣೆ ಮುಗಿಸಿ ತೀರ್ಪು ಪ್ರಕಟಣೆಗಾಗಿ ತಾರೀಖು 25.6.2016 ಕ್ಕೆ ನಿಗದಿಪಡಿಸಲಾತಿರುತ್ತದೆ. 15.6.2016 ರಂದು ಕೃಷ್ಣನು ಸದರಿ ಮಾಗಡಿಯಲ್ಲಿನ 14ನೇ ಸಂಖ್ಯೆಯ ನಿವೇಶನದ ಸಲುವಾಗಿ ರಾಮನ ವಿರುದ್ಧ ನಿರ್ದಿಷ್ಟ ಪರಿಪಾಲನೆಗಾಗಿ ದಾವೆಯನ್ನು ಹೂಡುತ್ತಾನೆ. ಮೇಲಿನ ಸಂದರ್ಭಗಳಲ್ಲಿ ಅನ್ವಯವಾಗುವ ಕಾನೂನನ್ನು ತಿಳಿಸಿ.

(b) To what an extent a person is competent to give oral evidence regarding custom? Given an example. **3**

ಯಾವ ಮಟ್ಟದವರೆಗೆ ಒಬ್ಬ ವ್ಯಕ್ತಿಯು ಸಂಪ್ರದಾಯದ ಬಗ್ಗೆ ಮೌಖಿಕ ಸಾಕ್ಷ್ಯ ನೀಡಬಹುದು? ಒಂದು ಉದಾಹರಣೆಯನ್ನು ಕೊಡಿ.

(c) What is the differences between admission of documents and admission of contents? Explain with reference to documentary estoppel. **4**

ದಾಖಲೆಯ ಒಕ್ಕಣೆಯನ್ನು ಒಪ್ಪಿಕೊಳ್ಳುವುದು ಅಂದರೇನು? ದಾಖಲೆಯಿಂದ ವಿಭಂದತ್ವವನ್ನು ಉಲ್ಲೇಖಿಸಿ.

(d) What is mode of devolution of estate under law of survivorship and that of inheritance. **3**

'ಉತ್ತರ ಜೀವಿತಾಧಿಕಾರ' ಮತ್ತು 'ವಾರಸು' ಗಳಲ್ಲಿ ಆಸ್ತಿಯನ್ನು ಹೊಂದುವ ಬಗೆಗಳನ್ನು ತಿಳಿಸಿ.

11 (a) What is the procedure for the formation of a residential layout on an agricultural land to the extent of 3 acres located in the heart of city where carrying out agriculture is next to impossibility. Which are the statutes which require compliance in the process. **5**

ನಗರದ ಹೃದಯ ಭಾಗದಲ್ಲಿರುವ 3ಎಕರೆ ವ್ಯವಸಾಯ ಭೂಮಿಯು ವ್ಯವಸಾಯಕ್ಕೆ ಬಹುತೇಕ ಅಸಾಧ್ಯವಾದಗ ಅದರಲ್ಲಿ ವಸತಿ ಬಡಾವಣೆಯನ್ನು ನಿರ್ಮಿಸಲು ಪಾಲಿಸಬೇಕಾದ ಪ್ರಕ್ರಿಯೆಗಳಿಗೆ ಸಂಬಂಧಪಟ್ಟ ಕಾಯಿದೆಗಳನ್ನು ತಿಳಿಸಿ.

(b) Distinguish between 'Patria Potesta' and 'Powers of Karta' under Hindu Joint Family. **4**

ಹಿಂದು ಒಟ್ಟು ಕುಟುಂಬದ ಪ್ರಕಾರ 'ಕರ್ತನ ಅಧಿಕಾರಗಳು' ಮತ್ತು 'ಪೆಟ್ರಿಯ ಪೊಟೆಸ್ಟ' ನಡುವಿನ ಅಂತರಗಳನ್ನು ತಿಳಿಸಿ.

12 Translate the following passage from English to Kannada **5**

"Oh lord give me strength to bear joys and sorrows equally in my life". "Oh my lord give me strength to strikeout poverty in my heart". So says Sri Rabindranath Tagore in "This is my prayer to Thee". "Oh my inspiration you become permanent, do not touch the end and do not knock at any doors". So says Rastrakavi Shri Kuparahalli Venkatappa Putappa. "Fair is foul and foul is fair hover through fog and filthy air". So say the witches in Macbeth drama by Shakespeare. "Romans friends and countryman please lend me your ears". So says Mark Antony in drama Julius Ceaser.

In the olden days authors couldn't find comparison to Kalidasa and William Shakespeare and that paved the way to call Kalidasa as Indian Shakespeare and Shakespeare as Greek Kalidasa.

13 Translate the following passage from Kannada to English 5

ಸ್ನೇಹವು ಸ್ನೇಹವನ್ನೆ ನಿರೀಕ್ಷಿಸುತ್ತದೆ. ಅದನ್ನು ಸಹಾಯ ಪಡೆಯುವುದಕ್ಕಾಗಿ ಉಪಯೋಗಿಸಿಕೊಳ್ಳಬಾರದು. ಮನುಷ್ಯನಲ್ಲಿರುವ ಪಾಂಡಿತ್ಯ ಹಾಗೂ ವಿದ್ವತ್ತು ಆಯಾ ಕ್ಷೇತ್ರಗಳಿಗೆ ಮೀಸಲಾಗುತ್ತವೆ ಮತ್ತು ಅವುಗಳಿಂದ ಸಾಮಾಜಿಕ ಸೇವೆ ಮಾಡಬೇಕು. ಒಬ್ಬ ಉತ್ತಮ ಗಾಯಕನು ತನ್ನ ಗಾಯನವನ್ನು ಅಧಿಕಾರ ಪಡೆಯುವ ಸಾಧನವಾಗಿ ಉಪಯೋಗಿಸಿಕೊಳ್ಳಬಾರದು. ವಿಷ ಮತ್ತು ವಿಷಯ ಗಳ ಮಧ್ಯೆ ಅಂತರವು ಕೇವಲ ಒಂದು ಅಕ್ಷರ. ಆದರೆ ವಿಷವು ಸೇವಿಸಿದ ಮಾತ್ರದಿಂದಲ್ಲೆ ಪ್ರಾಣವನ್ನು ಹರಣ ಮಾಡುತ್ತದೆ ಮತ್ತೆ ವಿಷಯವು ಅಣು ಅಣುವಾಗಿ ಕೇವಲ ಸ್ಮರಣೆ ಮಾತ್ರದಿಂದಲ್ಲೆ ಜೀವನವನ್ನು ನರಕ ಮಾಡಿ ನಂತರ ಜೀವ ಹರಣ ಮಾಡುತ್ತದೆ. ಕಣ್ಣು ಮುಚ್ಚಿದರೆ (ನಿಧನ) ಕಾಡೇ ಗೂಡು (ಸ್ಮಶಾನ) ಉದ್ದಿನ ಮೂಟೆ (ದೇಹ) ಉರುಳಿ ಹೋಯ್ತು ನಮ್ಮಯ ಹಕ್ಕಿ ಬಿಟ್ಟೇ ಬಿಟ್ಟೆ (ಪ್ರಾಣ ಪಕ್ಷಿ ಹಾರಿ ಹೊಯ್ತು) ದೇವರ ಪಾದ ಸೇರಿ ಬಿಡ್ತು. ಇರು ಕಣ್ಣಾ ಮುಚ್ಚಾಲೆ.

# EXAMINATION FOR RECRUITMENT TO THE POSTS OF DISTRICT JUDGES

ಜಿಲ್ಲಾ ನ್ಯಾಯಾಧೀಶರುಗಳ ಹುದ್ದೆಗಳಿಗೆ ನೇಮಕಾತಿ ಪರೀಕ್ಷೆ

## (CRIMINAL LAW)

**QUESTION PAPER**

ಪ್ರಶ್ನೆ ಪತ್ರಿಕೆ

**12TH NOVEMBER, 2016**
ದಿನಾಂಕ 12ನೇ ನವೆಂಬರ್, 2016

**Max. Marks: 150**
ಗರಿಷ್ಠ ಅಂಕಗಳು: 150

**TIME: 2.30 pm to 5.30 pm**
ಸಮಯ: ಮಧ್ಯಾಹ್ನ 2.30 ರಿಂದ 5.30 ಘಂಟೆ

**<u>INSTRUCTIONS TO CANDIDATES:</u>**
<u>ಅಭ್ಯರ್ಥಿಗಳಿಗೆ ಸೂಚನೆಗಳು</u>

1) **It is compulsory for all the candidates to answer atleast one of the papers in English and in so far as the other paper is concerned, it shall be optional for the candidates to answer the same either in English or in Kannada.**

   ಅಭ್ಯರ್ಥಿಗಳು ಖಡ್ಡಾಯವಾಗಿ ಒಂದು ಪ್ರಶ್ನೆ ಪತ್ರಿಕೆಯನ್ನು ಆಂಗ್ಲಭಾಷೆಯಲ್ಲಿ ಉತ್ತರಿಸಬೇಕು. ಉಳಿದ ಪ್ರಶ್ನೆ ಪತ್ರಿಕೆಯನ್ನು ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ವಿವೇಚನೆಗೆ ಬಿಡಲಾಗಿದೆ.

2) **If there is any discrepancy in the questions in English language and in Kannada language, the questions as framed in English language would prevail.**

   ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ಲೋಪ ಕಂಡುಬಂದಲ್ಲಿ, ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ನಿರ್ಣಾಯಕವಾಗುವುದು.

1(a) Seetha is the wife of Sethu. Neetha is the sister of Seetha. Kethu is the brother of Sethu. Seetha causes bodily injury with vegetable cutter on Kethu and Sethu outrages the modesty of Neetha. Criminal case is registered against Sethu for the offence punishable under section 354 IPC. Another Criminal case is registered against Seetha under Section 326 IPC, police are searching both Sethu and Seetha. Meanwhile Sethu arranges for concealing Seetha in the sump (vacant underground water tank) and Seetha makes foolproof arrangement for hiding Sethu in a big almirah in the car shed. Thus each of them kept the other away from the notice or knowledge of the police. Whether there is Criminal liability on Sethu and Seetha? If so, why? If not, why? 4

ಸೀತಾ ಸೇತುವಿನ ಹೆಂಡತಿ, ನೀತ ಸೀತಾಳ ತಂಗಿ, ಕೇತು ಸೇತುವಿನ ತಮ್ಮ, ಸೀತಾಳು ತರಕಾರಿ ಕತ್ತರಿಸುವ ಚಾಕುವಿನಿಂದ ಕೇತುವನ್ನು ಹಲ್ಲೆ ಮಾಡುತ್ತಾಳೆ ಮತ್ತು ಸೇತು ನೀತಾಳ ಮಾನಭಂಗ ಮಾಡಲು ಪ್ರಯತ್ನಿಸುತ್ತಾನೆ. ಸೇತುವಿನ ಮೇಲೆ ಭಾರತೀಯ ದಂಡ ಸಂಹಿತೆ ಕಲಂ 354ರ ಅಡಿಯಲ್ಲಿ ಒಂದು ಕ್ರಿಮಿನಲ್ ಮೊಕದ್ದಮೆ ನೊಂದಾಯಿಸಲಾಗಿದೆ. ಇನ್ನೊಂದು ಕ್ರಿಮಿನಲ್ ಮೊಕದ್ದಮೆಯನ್ನು ಭಾರತೀಯ ದಂಡ ಸಂಹಿತೆ ಕಲಂ 326ರ

ಅಡಿಯಲ್ಲಿ ಸೀತಾಳ ಮೇಲೆ ನೊಂದಾಯಿಸಲಾಗಿದೆ. ಪೋಲಿಸರು ಸೇತು ಮತ್ತು ಸೀತಾಳನ್ನು ಹುಡುಕುತ್ತಿದ್ದಾರೆ. ಆ ಸಮಯದಲ್ಲಿ ಸೇತು ಸೀತಾಳನ್ನು ನೆಲದಡಿಯಲ್ಲಿ ನೀರು ಕಾಲಿಯಾಗಿರುವ ತೊಟ್ಟಿ (ಸಂಪ್)ಯಲ್ಲಿ ಅಡಗಿಸಿದ್ದಾನೆ. ಸೀತಾಳು ಅನುಮಾನಕ್ಕೆ ಎಡೆ ಕೊಡದೆ ಸೇತುವನ್ನು ಕಾರು ಶೆಡ್ಡಿನಲ್ಲಿರುವ ಒಂದು ದೊಡ್ಡ ಅಲ್‌ಮೇರಾದಲ್ಲಿ ಅಡಗಿಸಿದ್ದಾಳೆ. ಈ ರೀತಿಯಾಗಿ ಅವರು ಒಬ್ಬರನ್ನೊಬ್ಬರು ಪೋಲಿಸರಿಗೆ ಮಾಹಿತಿ ಸಿಗದಂತೆ ಅಡಗಿಸಿರುತ್ತಾರೆ. ಸೇತು ಮತ್ತು ಸೀತಾರ ಮೇಲೆ ಯಾವುದಾದರು ದಂಡನಾರ್ಹ ಅಪರಾಧಗಳು ಮಾಡಲ್ಪಟ್ಟಿರುವುದೇ? ಹೌದು ಎಂದರೆ ಯಾವ ರೀತಿಯಲ್ಲಿ ಹೌದು, ಇಲ್ಲ ಎಂದರೆ ಯಾವ ರೀತಿಯಲ್ಲಿ ಇಲ್ಲ.

(b) Chor kumar breaks open a locked jewel box belonging to Sampath Kumar without the knowledge of the latter but after opening the said box he finds that there are no jewels in it and on closing it suffers a bleeding injury to the right index finger. Whether there is criminal liability on Chor kumar. If so, why? If not, why? 2

ಚೋರ್ ಕುಮಾರ್ ಎಂಬುವನು ಸಂಪತ್ ಎಂಬುವನಿಗೆ ಸೇರಿದ ಒಡವೆಗಳ ಪೆಟ್ಟಿಗೆಯನ್ನು ಸಂಪತ್ತಿಗೆ ಗೊತ್ತಿಲ್ಲದೆ ಒಡೆದು ತೆಗೆಯುತ್ತಾನೆ, ಆದರೆ ಅದನ್ನು ತೆರೆದು ನೋಡಿದಾಗ ಅಲ್ಲಿ ಯಾವುದೇ ಒಡವೆಗಳು ಇರುವುದಿಲ್ಲ, ಆದರೆ ಚೋರ್ ಕುಮಾರನು ಒಡವೆ ಪೆಟ್ಟಿಗೆಯನ್ನು ಮುಚ್ಚುವಾಗ ತನ್ನ ಬಲ ತೋರ್ ಬೆರಳಿಗೆ ರಕ್ತಗಾಯ ಮಾಡಿಕೊಳ್ಳುತ್ತಾನೆ. ಚೋರ್ ಕುಮಾರನಿಂದ ದಂಡಾನರ್ಹ ಅಪರಾಧವಾಗಿರುತ್ತದೆಯೇ? ಹೌದು ಎಂದರೆ ಯಾವ ರೀತಿಯಲ್ಲಿ ಹೌದು, ಇಲ್ಲ ಎಂದರೆ ಯಾವ ರೀತಿಯಲ್ಲಿ ಇಲ್ಲ.

(c) What is the validity period of an Ordinance regarding Criminal Law promulgated by a Governor of State and the one promulgated by the president of India. What is essential to make it to be Regular Statue ? 3

ರಾಜ್ಯಪಾಲರಿಂದ ಹಾಗೂ ಭಾರತದ ರಾಷ್ಟ್ರಪತಿಗಳಿಂದ ಜಾರಿಗೊಳಿಸಲ್ಪಟ್ಟ/ಅಪರಾಧಕ್ಕೆ ಸಂಬಂಧಪಟ್ಟ ಸುಗ್ರೀವಾಜ್ಞೆಯ ಚಲಾವಣಾವಧಿಯು ಎಷ್ಟು ಮತ್ತು ಸುಗ್ರೀವಾಜ್ಞೆಯು ಶಾಸನಬದ್ಧ ಕಾಯಿದೆ ಆಗುವುದು ಹೇಗೆ?

( d) What is the effect of Criminal Law Amending Ordinance No.IV of 1944 with reference to section 3 and 4. Whether it is a valid law at present. If so, why? If not, why? 6

ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ತಿದ್ದುಪಡಿಮಾಡುವ 1944ರ ಸುಗ್ರೀವಾಜ್ಞೆ ಸಂಖ್ಯೆ IV ಕಾಯಿದೆ ಕಲಂ 3 ಮತ್ತು 4ರ ಪರಿಣಾಮವೇನು? ಈಗ ಮೇಲ್ಕಂಡ ಸುಗ್ರೀವಾಜ್ಞೆಯು ಕಾನೂನು ಬದ್ಧವೇ? ಹೌದು ಎಂದರೆ ಯಾವ ರೀತಿಯಲ್ಲಿ ಹೌದು, ಇಲ್ಲ ಎಂದರೆ ಯಾವ ರೀತಿಯಲ್ಲಿ ಇಲ್ಲ.

2(a) Whether Article 20 (2) of The Constitution of India is the grund-norm and section 300 (1) to file Code of Criminal Procedure is a legal-norm. If so, why? If not, why? 8

ಭಾರತ ಸಂವಿಧಾನದ ಅನುಚ್ಛೇದ 20(2) ಗ್ರಂಡ್ ನಾರ್ಮ್ ಮತ್ತು ದಂಡಾ ಪ್ರಕ್ರಿಯ ಸಂಹಿತೆ ಕಲಂ 300(1) ಲಿಗಲ್ ನಾರ್ಮ್ ಆಗಿರುತ್ತದಯೇ. ಹೌದು ಎಂದರೆ ಯಾವ ರೀತಿಯಲ್ಲಿ ಹೌದು, ಇಲ್ಲ ಎಂದರೆ ಯಾವ ರೀತಿಯಲ್ಲಿ ಇಲ್ಲ.

(b) Whether exemption from Criminal liability is given to a wife whose husband is alive and the marriage is in force. If so what is the Constitutional validity of Section 497 Indian Penal Code. 2

ಭಾರತೀಯ ದಂಡ ಸಂಹಿತೆ ಕಲಂ 497ರ ಅಡಿಯಲ್ಲಿ ಅಪರಾಧಿಕ ಹೊಣೆಗಾರಿಕೆಯು ವಿವಾಹ ಜಾರಿಯಲ್ಲಿರುವ ಮತ್ತು ಪತಿಯು ಜೀವಂತವಾಗಿರುವ ಪತ್ನಿಯ ಮೇಲೆ ರಿಯಾಯಿತಿ ಉಂಟೆ? ಹೌದಾದರೆ ಸದರಿ ಕಲಂನ ಸಂವಿಧಾನ ಬದ್ಧತೆ ಏನು?

(c) A public servant is found guilty of embezzlement of cash and proved guilty in a departmental enquiry and is awarded penalty, whether can he be prosecuted under Criminal Law. Briefly state your reasons. 2

ಸಾರ್ವಜನಿಕ ನೌಕರನು ಹಣ ದುರುಪಯೋಗ ಮಾಡಿ ಆತನ ಮೇಲಿನ ಅಪವಾಧವು ಇಲಾಖಾ ವಿಚಾರಣೆಯಲ್ಲಿ ಸ್ಥಿರಪಟ್ಟು ಆತನಿಗೆ ದಂಡನೆಯನ್ನು ವಿಧಿಸಿದ ನಂತರ, ಅವನನ್ನು ಅಪರಾಧಿಕ ಕಾನೂನಿನ ಅಡಿಯಲ್ಲಿ ಆತನನ್ನು ವಿಚಾರಣೆಗೆ ಗುರಿಪಡಿಸಬಹುದೇ? ಸಮರ್ಥಾನಾಂಶಗಳೊಂದಿಗೆ ಸಂಕ್ಷಿಪ್ತವಾಗಿ ವಿವರಿಸಿ?

3 (a) Discuss the Law relating to 'sanction' to prosecute a public servant with reference to Section 19 of the Prevention of Corruption Act 1988 and Section 197 of the Code of Criminal Procedure. 5

ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988ರ ಕಲಂ 19 ಮತ್ತು ದಂಡ ಪ್ರಕ್ರಿಯ ಸಂಹಿತೆ ಕಲಂ 197 ಗಳನ್ನು ಗಣನೆಗೆ ತೆಗೆದುಕೊಂಡು ಸಾರ್ವಜನಿಕ ನೌಕರನನ್ನು ಅಭಿಯೋಜನೆಗೆ ಒಳಪಡಿಸಲು ಅನುಮತಿ ಆದೇಶದ ಬಗ್ಗೆ ಇರುವ ಕಾನೂನನ್ನು ಚರ್ಚಿಸಿ.

(b) What is the law relating to Section 8 of The Prevention of Corruption Act 1988? 2

ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988ರ ಕಲಂ 8ರ ಬಗ್ಗೆ ಇರುವ ಕಾನೂನನ್ನು ತಿಳಿಸಿ.

(c) State the law relating to 'plurality of office' and the 'Sanction to Prosecute' a public servant by referring the decision of the Apex Court. 5

'ಕಛೇರಿಯ ಬಹುತ್ವದ ಬಗ್ಗೆ' ಮತ್ತು ಸಾರ್ವಜನಿಕ ನೌಕರನ ಮೇಲೆ ಅಪರಾಧಿಕ ಕ್ರಮ ತೆಗೆದುಕೊಳ್ಳಲು ಇರುವ ಕಾನೂನನ್ನು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖ ಮಾಡಿ.

(d) What is the legal position regarding duration of maximum sentence for the offence punishable under sections 306 and 366(A) of the Indian Penal Code committed on a member of Scheduled Caste and Scheduled Tribe by a non-member of Scheduled Caste and Scheduled Tribe with reference to 3 (2)_(v) of the Scheduled Caste and Scheduled Tribe of Prevention of Atrocities Act? 2

ಭಾರತೀಯ ದಂಡ ಸಂಹಿತೆ ಕಲಂ 306 ಮತ್ತು 366(ಅ)ಗಳಿಗೆ ನಿಗಧಿಪಡಿಸಿರುವ ಗರಿಷ್ಟ ಸಜೆಗಳ ಬಗ್ಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದಲ್ಲದವನು ಸದರಿ ಜಾತಿ ಹಾಗೂ ಪಂಗಡದವರ ಮೇಲೆ ಹೇಳಿದ ಅಪರಾಧಗಳನ್ನು ಎಸಗಿದರೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮೇಲಿನ ದೌರ್ಜನ್ಯ ನಿಗ್ರಹ ಕಾಯಿದೆ ಕಲಂ 3(2)(ವಿ) ರ ಅನ್ವಯ ಪರಿಣಾಮವೇನು ?

4(a) Evidence has to be "weighed and not counted ". Elucidate ? 4

ಸಾಕ್ಷ್ಯವನ್ನು ತೂಗಿ ನೋಡಬೇಕೇ ಹೊರತು ಎಣಿಸಿ ನೋಡುವುದಲ್ಲ. ಚರ್ಚಿಸಿ

(b) "Law is no respecter of persons and is the same for everyone". 4

"ಕಾನೂನು ವ್ಯಕ್ತಿಗಳ ಗೌರವಕಲ್ಲ, ಅದು ಎಲ್ಲಾರಿಗು ಒಂದೆ".

(c ) Mention the substance of "Legal insanity and medical insanity" 4

ಕಾನೂನು ಪ್ರಕಾರ "ಬುದ್ಧಿ ಭ್ರಮಣೆ" ಮತ್ತು "ವೈದ್ಯಕೀಯ ಬುದ್ಧಿಭ್ರಮಣೆಗಳ" ಸಾರಾಂಶವನ್ನು ತಿಳಿಸಿ

(d) "The right of private defence lasts so long as the apprehension of the danger to the body continues " substantiate. 4

ಅಪಾಯದ ದಾವಂತ ಹಾಗೂ ಸಂಕೇತವು ಎಲ್ಲಿಯವರೆಗೆ ವಿಸ್ತರಿಸುವುದೋ ಅಲ್ಲಿಯವರೆಗೆ ಆತ್ಮ ರಕ್ಷಣೆಯ ಹಕ್ಕು ಇರುತ್ತದೆ ಸಮರ್ಥಿಸಿ.

5(a) Kirathak is charged of the offence of rape punishable under section 376 IPC. And because of the said ghastly act victim becomes pregnant. Kirathak admits sexual intercourse on the victim but, contends that the victim voluntarily came forward and forced him for the act. What is the law regarding consent to sexual intercourse? 3

ಭಾರತೀಯ ದಂಡ ಸಂಹಿತೆ 376ರಂತೆ ಕಿರಾತಕನ ವಿರುದ್ಧ ಅತ್ಯಾಚಾರದ ಆರೋಪ ಹೊರಿಸಲಾಗಿದೆ ವಿಚಾರಣೆಯ ಸಮಯದಲ್ಲಿ ಕಿರಾತಕನ ಘೋರ ಕೃತ್ಯದ ಪರಿಣಾಮವಾಗಿ ನೊಂದ ಮಹಿಳೆಯು ಗರ್ಭವತಿಯಾಗುತ್ತಾಳೆ ವಿಚಾರಣೆಯ ಸಂಧರ್ಭದಲ್ಲಿ ಆರೋಪಿಯು ಲೈಂಗಿಕ ಕ್ರಿಯೆಯನ್ನು ಒಪ್ಪಿಕೊಂಡಿರುತ್ತಾನೆ ಆದರೆ ಮಹಿಳೆಯು ಮುಂದೆ ಬಂದು ಒತ್ತಾಯಿಸಿದ್ದರಿಂದ ಲೈಂಗಿಕ ಕ್ರಿಯೆ ನಡೆಯಿತೆಂಬ ನಿಲುವು ಹೊಂದಿರುತ್ತಾನೆ. ಲೈಂಗಿಕ ಕ್ರಿಯೆಗೆ ಒಪ್ಪಿಗೆಯ ಬಗ್ಗೆ ಇರುವ ಕಾನೂನನ್ನು ತಿಳಿಸಿ?

(b) Kinkara commits murder and he is awarded imprisonment for life and fine of Rs.20,000/- instead of death sentence and he is lodged in Ballari Jail and he murders a fellow convict in the jail. Being a life convict who was awarded life sentence instead of death penalty, is there a particular form of compulsory sentence pronounced against him. Discuss with reference to Constitutional validity of section 303 of Indian Penal Code by referring the judgment of Apex Court in *'Mithu vs State of Punjab'* AIR 1983 SC 473. 5

ಕಿಂಕರ ಎಂಬುವವನು ಒಂದು ಕೊಲೆ ಮಾಡಿದ್ದಕ್ಕೆ ನ್ಯಾಯಾಲಯವು ತನ್ನ ವಿವೇಚನೆಯಿಂದ ಮರಣ ದಂಡನೆ ಬದಲಾಗಿ ಅಜೀವ ಕಾರಾಗೃಹವಾಸ ಮತ್ತು ರೂ.20,000/–ಗಳ ಜುಲ್ಮಾನೆ ವಿಧಿಸುತ್ತದೆ. ಆರೋಪಿಯಿಂದ ಖೈದಿಯಾದ ಆತನನ್ನು ಬಳ್ಳಾರಿಯ ಕಾರಾಗೃಹದಲ್ಲಿ ಇಡಲಾಗಿದೆ. ಮತ್ತೆ ಅವನು ಸಹ ಖೈದಿಯನ್ನು ಕೊಲೆ ಮಾಡುತ್ತಾನೆ ಸದರಿ ಸಂದರ್ಭದಲ್ಲಿ ಯಾವುದೇ ಒಂದು ಶಿಕ್ಷೆಯು ಕಡ್ಡಾಯವಾಗಿ ವಿಧಿಸಬೇಕೆ, ಮತ್ತು ಭಾರತೀಯ ದಂಡ ಸಂಹಿತೆ ಕಲಂ 303ರ ಸಂವಿಧಾನ ಬದ್ಧತೆ ಅಥವಾ ಸಂವಿಧಾನ ಬಾಹಿರತೆ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪಾದ 'ಮಿತು ವಿ. ಪಂಜಾಬ್ ರಾಜ್ಯ' AIR 1983 SC 473 ಉಲ್ಲೇಖಿಸಿ ಬರೆಯಿರಿ.

(c) What is the effect of absence of charge specifically for the offence punishable under section 498(A), where the accused is tried for the offence punishable u/s 304(B)? 4

ಒಂದು ಆರೋಪಿಯನ್ನು ಭಾರತೀಯ ದಂಡ ಸಂಹಿತೆ ಕಲಂ304 (ಬಿ)ರ ಅಪರಾಧಕ್ಕಾಗಿ ವಿಚಾರಣೆಗೆ ಗುರಿಪಡಿಸಿದಾಗ ನಿರ್ದಿಷ್ಟವಾಗಿ ಕಲಂ 498(ಎ) ಅಪರಾಧಕ್ಕೆ ದೋಷಾರೋಪಣೆ ಇಲ್ಲದಿದ್ದರೆ ಪರಿಣಾಮವೇನು.

(d) Effect of Non using the deadly weapon or injuries to the vital organs where the accused is tried for the offence punishable under section 302 Indian Penal Code. 2

ಭಾರತೀಯ ದಂಡ ಸಂಹಿತೆ ಕಲಂ 302ರ ಪ್ರಕಾರ ಕೊಲೆಯ ಅಪರಾಧಕ್ಕಾಗಿ ವಿಚಾರಣೆಗೊಳಪಟ್ಟಿರುವ ಆರೋಪಿಯು ತನ್ನ ಕೃತ್ಯಕ್ಕೆ ಮಾರಕಾಸ್ತ್ರ ಮತ್ತು ಪ್ರಮುಖವಾದ ಹಾಗೂ ಸೂಕ್ಷ್ಮವಾದ ಅಂಗಗಳ ಮೇಲೆ ದಾಳಿ ಮಾಡಿಲ್ಲವಾದರೆ ಅದರ ಪರಿಣಾಮವೇನು.

6(a) What exactly is the difference between "Euthanasia" and "Abetment" to commit suicide? 2

"ಯುತನೇಶಿಯಾ" (ದಯಾಮರಣ) ಮತ್ತು "ಆತ್ಮಹತ್ಯೆಗೆ ಪ್ರಚೋದನೆಗಳ" ನಡುವೆ ಇರುವ ವ್ಯತ್ಯಾಸವೇನು ?

(b) Rape is a crime and not a "medical condition". Rape is a "legal term" and not a diagnosis to be made by the medical officer. Briefly explain. 4

"ಅತ್ಯಾಚಾರವು ಒಂದು ಅಪಾಯವೇ ಹೊರತು ವೈದ್ಯಕೀಯ ಸ್ಥಿತಿಯಲ್ಲ" "ಅತ್ಯಾಚಾರವು ಒಂದು ಕಾನೂನಿನ ಪದವೇ ಹೊರತು ವೈದ್ಯ ಪರೀಕ್ಷೆ ಅಥವಾ ವೈದಕೀಯ ಸಂಶೋಧನೆ ಅಲ್ಲ" ಇದನ್ನು ಸಂಕ್ಷಿಪ್ತವಾಗಿ ವ್ಯಾಖ್ಯಾನಿಸಿ.

(c) Examine the following: 3

I Proof beyond reasonable doubt
II Preponderance of probability

ಈ ಕೆಳಕಂಡವುಗಳನ್ನು ವಿಶ್ಲೇಷಿಸಿ:
1) ಸಂದೇಹಾತೀತವಾಗಿ ರುಜುವಾತು
2) ಬಾಹುಳ್ಯದ ಸಾಧ್ಯತೆ

(d) Ajit, Sujit and Parajit are the patients whose conditions are critical. Raja is a ward boy of the ward where all the above three persons are accommodated and they are on ventilators. Ajit dies of heart-attack while on ventilator. Sujit is recovering, but condition of Parajit is becoming more critical and he has entered coma. Incidentally, Sujit and ward boy Raja are having election rivalry against Parajit. The superintendent of the hospital directs Vahan kumar to shift the deadbody of Ajit to mortuary. When Vahan kumar was on the way to the ward Raja and Sujit who are also relatives were planning something. When Vahan kumar entered the ward and asked Raja to take him near the deadbody of Ajit, he tells that patient Sujit knows better and shows his index finger towards Sujit. When Vahan kumar asks Sujit about Ajit, the latter makes gesture through his hand towards the patient Parajit and when Vahan kumar asks Raja for help he makes gesture thereby communicating that urgently he has to attend call of nature. Vahan kumar straight away goes towards Parajit's cot and calls Yadav ward boy of another ward for shifting the body from the cot to the stretcher. And while shifting Parajit to the stretcher Vahan kumar removes the ventilator and pipes put on Parajit, consequently Parajit dies of suffocation. State whether criminal liability is there on Sujit, Raja, Vahan kumar and Yadav, if yes, why? if not, why? Base your comments on sec.302, 304, 299, 34 IPC. 7

ಅಜಿತ್ ಸುಜಿತ್ ಹಾಗೂ ಪರಾಜಿತ್ ರವರುಗಳ ಆರೋಗ್ಯಗಳು ಹದಗೆಟ್ಟಿದ್ದರಿಂದ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಅವರುಗಳೆಲ್ಲರು ಒಂದೇ ಕೋಣೆಯಲ್ಲಿ ದಾಖಲಾಗಿದ್ದಾರೆ ಮತ್ತು ಎಲ್ಲರಿಗೂ ಕೃತಕ ಉಸಿರಾಟದ ವ್ಯವಸ್ಥೆಯನ್ನು ಅಳವಡಿಸಲಾಗಿದೆ ಸದರಿ ಕೋಣೆಯ ಪರಿಚಾರಕನ ಹೆಸರು ರಾಜ. ಅಜಿತ್‌ನು ಹೃದಯಾಘಾತದಿಂದ ಮರಣಹೊಂದುತ್ತಾನೆ ಸುಜಿತ್‌ನು ಚೇತರಿಸಿಕೊಳ್ಳುತ್ತಿರುತ್ತಾನೆ ಪರಾಜಿತ್‌ನ ಆರೋಗ್ಯ ಪರಿಸ್ಥಿತಿಯು ಬಿಗಡಾಯಿಸುತ್ತಿದೆ ಮತ್ತು ಅವನು ಪ್ರಜ್ಞಾಹೀನ ಸ್ಥಿತಿಗೆ ಹೋಗಿರುತ್ತಾನೆ ಏತನ್ಮಧ್ಯೆ ಸುಜಿತ್ ಮತ್ತು

ರಾಜರವರಿಗೆ ಪರಾಜಿತನ ಮೇಲೆ ಚುನಾವಣಾ ದ್ವೇಷ ಇರುತ್ತದೆ. ಆಸ್ಪತ್ರೆಯ ಮುಖ್ಯರು ವಾಹನ್ ಕುಮಾರ್ ಎಂಬುವನಿಗೆ ಅಜಿತ್‌ನ ಶವವನ್ನು ಶವಾಗಾರಕ್ಕೆ ತಲುಪಿಸಲು ಹೇಳುತ್ತಾನೆ. ವಾಹನ ಕುಮಾರನು ಕೋಣೆಯೆಡೆಗೆ ಬರುವಾಗ, ರಾಜ ಮತ್ತು ಸುಜಿತ್‌ರವರು (ಇಬ್ಬರೂ ಸಂಬಂಧಿಕರು) ಏನೋ ಯೋಜನೆ ಮಾಡುತ್ತಿರುತ್ತಾರೆ. ವಾಹನ್ ಕುಮಾರ್‌ನು ಕೋಣೆಗೆ ಬಂದು ಅಜಿತ್‌ನ ಹೆಣದ ಬಗ್ಗೆ ರಾಜನನ್ನು ಕೇಳುತ್ತಾನೆ ಅದಕ್ಕೆ ಅವನು ರೋಗಿ ಸುಜಿತ್‌ನಿಗೆ ಚೆನ್ನಾಗಿ ಗೊತ್ತೆಂದು ಹೇಳಿ ತೋರ್ಬೆರಳನ್ನು ಸುಜಿತ್‌ನ ಕಡೆಗೆ ತೋರಿಸುತ್ತಾನೆ ವಾಹನ್ ಕುಮಾರ್‌ನು ಸುಜಿತ್‌ನನ್ನು ಕುರಿತು ಅಜಿತ್‌ನ ಬಗ್ಗೆ ಕೇಳಲು ಸುಜಿತ್‌ನು ಪರಾಜಿತನ ಕಡೆ ಸನ್ನೆ ಮಾಡಿ ತೋರಿಸುತ್ತಾನೆ. ವಾಹನ್ ಕುಮಾರ್‌ನು ಪರಾಜಿತನ ಮಂಚದ ಬಳಿ ಹೋಗಿ ರಾಜನನ್ನು ಕರೆಯಲು ಅವನು, ತಾನು ಬಹಿರ್ದೆಸೆಗೆ ಹೋಗಲು ಅವಸರವೆಂದು ಸನ್ನೆ ಮೂಲಕ ಹೇಳಿ ಹೊರಟುಹೋಗುತ್ತಾನೆ. ವಾಹನ್ ಕುಮಾರ್‌ನು ಇನ್ನೊಂದು ಕೋಣೆಯ ಪರಿಚಾರಕನಾದ ಯಾದವನನ್ನು ಕರೆಸಿ ಪರಾಜಿತನನ್ನು ಮಂಚದಿಂದ ಸ್ಟ್ರೆಚರ್ ಮೇಲೆ ಸ್ಥಳಾಂತರಿಸುವಾಗ ವಾಹನ್ ಕುಮಾರನು ಪರಾಜಿತನಿಗೆ ಅಳವಡಿಸಲಾಗಿದ್ದ ಉಸಿರಾಟ ಉಪಕರಣ ಮತ್ತು ಇತರೆ ನಳಿಕೆಗಳನ್ನು ಪರಾಜಿತನ ದೇಹದಿಂದ ತೆಗೆಯುತ್ತಾನೆ ಪರಿಣಾಮವಾಗಿ ಪರಾಜಿತನು ಉಸಿರುಕಟ್ಟಿ ಸಾಯುತ್ತಾನೆ. ಮೇಲಿನ ಸಂಧರ್ಭದಲ್ಲಿ ಅಪರಾಧಿಕ ಹೊಣೆಗಾರಿಕೆಯ ಬಗ್ಗೆ ಭಾರತೀಯ ದಂಡ ಸಂಹಿತೆ ಕಲಂ 302, 304, 299 ಮತ್ತು 34 ಗಳನ್ನು ಗಣನೆಗೆ ತೆಗೆದುಕೊಂಡು ಸುಜಿತ್, ರಾಜ, ವಾಹನ್ ಕುಮಾರ್ ಮತ್ತು ಯಾದವ್ ರವರ ಮೇಲೆ ಅಪರಾಧಿಕ ಹೊಣೆಗಾರಿಕೆಯ ಬಗ್ಗೆ ಉಲ್ಲೇಖಿಸಿ.

7(a) Whether an accused charged of criminal offence punishable under Indian Penal Code entitled to invoke right of private defence? Then mention the necessity to call evidence and also the burden of proof. 4

ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದೋಷಾರೋಪ ಹೊತ್ತಿರುವ ಒಬ್ಬ ಆರೋಪಿಯು ಆತ್ಮರಕ್ಷಣೆಯ ಹಕ್ಕನ್ನು ಪ್ರತಿಪಾದಿಸಬಹುದೇ? ಹಾಗಿದ್ದರೆ ಸಾಕ್ಷ್ಯ ನೀಡುವ ಭಾದ್ಯತೆಯ ಅವಶ್ಯಕತೆ ಹಾಗೂ ರುಜುವಾತು ಪಡಿಸುವ ಬಾಧ್ಯತೆಯನ್ನು ತಿಳಿಸಿ.

(b) State the difference between rejection of bail and cancellation of bail ? 2

ಜಾಮೀನು ನಿರಾಕರಣೆ ಮತ್ತು ಜಾಮೀನು ರದ್ದಿಯಾತಿಗಳ ಮಧ್ಯೆ ಇರುವ ವ್ಯತ್ಯಾಸ ತಿಳಿಸಿ.

(c) Dustanath offers a chocolate to Kutty, a child of 4 years and also gives a cup of ice-cream mixed with cyanide poison and asks the child to give poisonous ice-cream quietly to Meena who is the mother of child Kutty. The child gets confused while carrying the cup and gives it to the wife of Dustanath whose name is also Meena. Meena consumes full ice-cream and dies within few minutes in the house of Dustanath. Inquest mahazar is conducted in the bedroom in the house of Dustanath where the deadbody was found. Post mortem report suggests that cause of death of Meena was deadly poisonous substance entering her stomach. During the trial all the family members and well wishers of Meena turn hostile. In the opinion of the Court child Kutty is not having enough maturity to depose as witness. In the above circumstances considering applicable law and particularly section 106 Evidence Act write your opinion on the legal position. 4

ದುಷ್ಟನಾಥನು 4 ವರ್ಷದ ಮಗುವಾದ ಕುಟ್ಟಿಯನ್ನು ಕರೆದು ಒಂದು ಚಾಕಲೇಟ್ ಕೊಡುತ್ತಾನೆ. ಹಾಗೆಯೇ ಒಂದು ಬಟ್ಟಲಲ್ಲಿ ಸ್ಯೆನೇಡ್ ವಿಷ ಮಿಶ್ರಿತ ಐಸ್‌ಕ್ರೀಮನ್ನು ಕೊಟ್ಟು ಕುಟ್ಟಿಯ ತಾಯಿಯಾದ ಮೀನಾಳಿಗೆ ಕೊಡಬೇಕೆಂದು ಹೇಳುತ್ತಾನೆ. 4 ವರ್ಷದ ಮಗುವಾದ ಕುಟ್ಟಿಯು ಗೊಂದಲದಲ್ಲಿ ಬಿದ್ದು ವಿಷಪೂರಿತ ಐಸ್‌ಕ್ರೀಂ ಇರುವ ಬಟ್ಟಲನ್ನು ದುಷ್ಟನಾಥನ ಹೆಂಡತಿಯಾದ ಮೀನಾ(ಒಂದೇ ಹೆಸರು)ಳಿಗೆ ಕೊಡುತ್ತಾಳೆ ಪರಿಣಾಮವಾಗಿ ದುಷ್ಟನಾಥನ ಹೆಂಡತಿಯಾದ ಮೀನಾಳು ಕೆಲವೇ ನಿಮಿಷಗಳಲ್ಲಿ ವಿಷಪೂರಿತ ಐಸ್‌ಕ್ರೀಂ ಸೇವಿಸಿದ್ದರಿಂದ ಸಾಯುತ್ತಾಳೆ. ದುಷ್ಟನಾಥನು ತನ್ನ ಹೆಂಡತಿ ಮೀನಾಳನ್ನು ಕೊಲೆ ಮಾಡಿರುವುದಾಗಿ ಆರೋಪ ಹೊರಿಸಲಾಗಿದೆ.

ದುಷ್ಟನಾಥನ ಹೆಂಡತಿ ಮೀನಾಳು ಸತ್ತಸ್ಥಳ ಅಂದರೆ ಅವಳ ಮನೆಯ ಮಲಗುವ ಕೋಣೆಯಲ್ಲಿ ಶವ ಪಂಚನಾಮೆ ಮಾಡಲಾಗಿದೆ. ಅಲ್ಲಿ ಮೀನಾಳ ಮರಣೋತ್ತರ ಪರೀಕ್ಷೆಯಿಂದ ಆತಳ ಸಾವು ಘೋರ ವಿಷ ಮಿಶ್ರಿತ ಪದಾರ್ಥವು ಆಕೆಯ ಹೊಟ್ಟೆಗೆ ಸೇರಿದ್ದರಿಂದ ಆಯಿತು ಎಂದು ಹೇಳುತ್ತದೆ. ವಿಚಾರಣೆಯ ವೇಳೆಯಲ್ಲಿ ಪ್ರಮುಖ ಸಾಕ್ಷಿಗಳಾದ ಮೀನಾಳ ಕುಟುಂಬದ ಸದಸ್ಯರು ಮತ್ತು ಶ್ರೇಯೋಭಿಲಾಷಿಗಳು ಅಭಿಯೋಜನೆಗೆ ಪ್ರತಿಕೂಲವಾಗುತ್ತಾರೆ. ನ್ಯಾಯಾಧೀಶರ ದೃಷ್ಟಿ ಹಾಗೂ ಭಾವನೆಯಲ್ಲಿ 4 ವರ್ಷದ ಮಗು ಕುಟ್ಟಿಯು ಸಾಕ್ಷಿ ಹೇಳಲು ಅಶಕ್ತಳು ಎಂಬುದಾಗಿ ಹೇಳಲಾಗಿದೆ. ಮೇಲಿನ ಸಂಧರ್ಭಗಳಲ್ಲಿ ಅನ್ವಯಿಸುವ ಕಾನೂನುಗಳನ್ನು ಮತ್ತು ಮುಖ್ಯವಾಗಿ ಸಾಕ್ಷ್ಯ ಕಾಯಿದೆ ಕಲಂ 106 ರನ್ನು ಗಣನೆಗೆ ತೆಗೆದುಕೊಂಡು ಕಾನೂನಿನ ಅಂಶದಲ್ಲಿ ನಿಮ್ಮ ಅಭಿಪ್ರಾಯವನ್ನು ತಿಳಿಸಿ.

(d) Raman sees Chandan doing an act which appears to be causing grievous hurt to Nandan. Raman rushes and takes Chandan to police station by holding and pulling the hand of Chandan, in the result causes injury on the hand of Chandan. The truth is Chandan was acting in exercise of his right of private defence, which was not known to Raman. What about the criminal liability? 2

ಚಂದನನು ನಂದನನ ಮೇಲೆ ತೀವ್ರ ಸ್ವರೂಪದ ಗಾಯಗಳನ್ನು ಮಾಡುತ್ತಿರುವುದಾಗಿ ಗಮನಿಸಿ ರಾಮನು ಧಾವಿಸಿ ಚಂದನನ ಕೈ ಹಿಡಿದು ಎಳೆದು ಪೋಲೀಸ್ ಠಾಣೆಗೆ ಕರೆದೊಯ್ಯುತ್ತಾನೆ ತತ್ಪರಿಣಾಮವಾಗಿ ಚಂದನನ ಕೈಯಿಗೆ ಗಾಯವಾಗುತ್ತದೆ. ನಿಜ ಸ್ಥಿತಿಯೆಂದರೆ ಚಂದನನು ತನ್ನ ಆತ್ಮರಕ್ಷಣೆ ಮಾಡಿಕೊಳ್ಳುತ್ತಿರುತ್ತಾನೆ ಆದರೆ ರಾಮನಿಗೆ ಆ ವಿಷಯ ಗೊತ್ತಿರುವುದಿಲ್ಲ ಈ ಸಂಧರ್ಭದಲ್ಲಿ ಅಪರಾಧಿಯ ಹೊಣೆಗಾರಿಕೆಯ ಬಗ್ಗೆ ತಿಳಿಸಿ.

8(a) List the Criminal offences under the Karnataka Stamp Act 1957. 3

ಕರ್ನಾಟಕ ಮುದ್ರಾಂಕ ಕಾಯಿದೆ 1957ರ ಅಡಿಯಲ್ಲಿ ಸೂಚಿಸಿರುವ ಅಪರಾಧಗಳನ್ನು ಪಟ್ಟಿ ಮಾಡಿ.

(b) Briefly explain the relevant principles under the Directive principles of State Policy under the Constitution with reference to Section 357 of the Code of Criminal Procedure and Victim Compensation Fund. 7

ಸಂವಿಧಾನದ ಅಡಿಯಲ್ಲಿ ರಾಜ್ಯ ನಿರ್ದೇಶಕ ತತ್ವಗಳಲ್ಲಿ ಸೂಕ್ತವಾದ ತತ್ವ ಹಾಗೂ ದಂಡ ಪ್ರಕ್ರಿಯ ಸಂಹಿತೆ ಕಲಂ 357 ಮತ್ತು ನೊಂದವರ ಪರಿಹಾರ ನಿಧಿ ಸಂಬಂಧಿಸಿದಂತೆ ಇರುವ ತತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.

(c) State the circumstances under which a person can be detained under the law relating to Preventive Detention with reference to Constitution and function of the advisory board. 6

ಒಬ್ಬ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಡಲು ಅಧಿಕಾರ ನೀಡುವ 2 ಕಾಯಿದೆಗಳನ್ನು ತಿಳಿಸಿ. ಈ ಸಂಬಂಧದಲ್ಲಿ ಸಲಹಾ ಮಂಡಳಿಯ ರಚನೆ ಹಾಗೂ ಅದರ ಕಾರ್ಯ ನಿರ್ವಹಣಾ ಪ್ರಕ್ರಿಯೆ ತಿಳಿಸಿ.

9(a) Discuss the reformative and deterrent theories of punishment and if the deterrent theory is made applicable how does it reconcile with Human rights Protection Act? 11

ಸುಧಾರಣ ಶಿಕ್ಷ ತತ್ವ ಹಾಗೂ ಘೋರ ಶಿಕ್ಷ ತತ್ವಗಳ ಬಗ್ಗೆ ಚರ್ಚಿಸಿ. ಒಂದು ವೇಳೆ ಘೋರ ಶಿಕ್ಷ ತತ್ವವನ್ನು ನಮ್ಮ ವ್ಯವಸ್ಥೆಗೆ ಅಳವಡಿಸಿಕೊಂಡರೆ ಅದನ್ನು ಮಾನವ ಹಕ್ಕುಗಳ ರಕ್ಷಣಾ ಕಾಯಿದೆ ತಾಳೆ ಮಾಡಿ ಹೊಂದಿಸುವುದು ಹೇಗೆ?

(b) Discuss the law relating to abetment to commit abetment of an offence. 5

ಅಪರಾಧಕ್ಕೆ ದುಷ್ಪ್ರೇರಣೆ ಮಾಡಲು ದುಷ್ಪ್ರೇರಣೆ ಮಾಡುವುದು ಎಂದರೇನು?

10(a) Mention 3 rebuttable and 1 irrebuttable presumption and on whom the burden of proof lies to negate the 3 rebuttable presumptions if stated by you.

ರುಜುವಾತಿನ ಮೂಲಕ ಅಲ್ಲಗಳೆಯಬಹುದಾದ 3 ಮತ್ತು ಅಲ್ಲಗೆಳೆಯಲಾಗದ ಒಂದು ಪೂರ್ವಭಾವನೆಗಳನ್ನು ತಿಳಿಸಿ ಮತ್ತು ನೀವು ಹೇಳಿದ ಮೂರು ಪೂರ್ವಭಾವನೆಗಳನ್ನು ರುಜುವಾತಿನ ಮೂಲಕ ಅಲ್ಲಗಳೆಯುವ ಹೊಣೆಗಾರಿಕೆ ಯಾರ ಮೇಲಿದೆ ಎಂದು ತಿಳಿಸಿ.

5

(b) State the circumstances under which Compoundable offences under the Indian Electricity Act are Compounded? State the procedure for such compounding.

ಭಾರತೀಯ ವಿದ್ಯುಚ್ಛಕ್ತಿಯ ಕಾಯಿದೆಯ ಅಡಿಯಲ್ಲಿ ರಾಜಿ ಮಾಡಿಕೊಳ್ಳತಕ್ಕ ಅಪರಾಧಗಳ ರಾಜಿ ಆಗಬಲ್ಲ ಹಾಗೂ ಅದರ ಪ್ರಕ್ರಿಯೆಯನ್ನು ತಿಳಿಸಿ.

5

11 Translate the following passage from English to Kannada Language 5

Implementing criminal law and following the criminal law are having interlinking relationship with each other. Right at the dawn of civilization the human beings had a practice but there was no substantial or procedural law. But what exactly was the practice then to some extent resemble the law today. But no one disputes the harshness of law earlier. It is said that there were nearly 300 felonies for which the punishment was death. One of the reference of interpretation of Hammurabi Code from Mesopotamian Civilization is that, in a case, where the stone fixed on top of the building and falls down and kills the elder son of a family, the elder son of the builder of that building was to be killed. One should thank the present legal system for its modification and the concern for the subjects.

12 Translate the following passage from Kannada to English Language 5

ಭಾಷೆಯ ಮೇಲೆ ಪ್ರಾವಿಣ್ಯತೆ ಹೊಂದ್ದಿದವರು ಮಾತ್ರ ಪ್ರವೀಣರಲ್ಲ. ಭಾಷೆಯು ಭಾವನೆಗಳನ್ನು ಒಬ್ಬರಿಂದ ಮತ್ತೊಬ್ಬರಿಗೆ ತಿಳಿಸುವ ಸಾಧನ. ಸೇವೆ ಮಾಡಲಿಚ್ಛಿಸುವ ಮನುಷ್ಯನು ಅದರ ಬಗ್ಗೆ ಜೋರಾಗಿ ಗರ್ಜಿಸಬೇಕಾಗಿಲ್ಲ ತಾಳ್ಮೆಯಿಂದ ಸೇವೆಯನ್ನು ಮಾಡಬೇಕು. ಅನ್ಯರ ಸಂತೋಷದಲ್ಲಿ ತನ್ನ ಸಂತೋಷವನ್ನು ಕಾಣಬೇಕು. ಯಾವುದೇ ವ್ಯಕ್ತಿಯು ತನಗೆ ಬರುವ ಆಮಿಷ ಹಾಗೂ ಕೆಟ್ಟ ಪ್ರಚೋದನೆಗಳನ್ನು ನೇರವಾಗಿ ಮತ್ತು ಪ್ರಾರಂಭದಲ್ಲಿಯೆ ಧೈರ್ಯದಿಂದ ನಿರಾಕರಿಸಬೇಕು ಆಗ ಎಷ್ಟೇ ಕಷ್ಟವಾದರು ಮುಂದೆ ಒಂದು ದಿನ ತಾನು ಮಹತ್ವದ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದೇನೆ ಎಂಬ ಸಂತೋಷವು ಸದ್ಭಾವನೆಗೆ ಮೂಲವಾಗುತ್ತದೆ. ಮತಾಂಧತೆಯು ಯಾವುದೇ ಧರ್ಮದ ದೇವರು ಹೇಳಿಲ್ಲ ಮತ್ತು ನಿರೀಕ್ಷಿಸುವುದಿಲ್ಲ ಆದರೆ ಕೆಲವು ಮಾನವರು ಸಣ್ಣ ತನದಿಂದ ಮತಾಂಧತೆಗೆ ಕಾರಣರಾಗುತ್ತಾರೆ ಮತ್ತು ತಮ್ಮ ದುಶ್ಚಟದಿಂದ ತಮ್ಮ ಧರ್ಮದಲ್ಲೂ ಅಶಾಂತಿ ತುಂಬಿ ಪರಧರ್ಮಕ್ಕೂ ಅದನ್ನು ರವಾನಿಸುತ್ತಾರೆ. ಯಾವ ಕೆಲವು ವಿಷಯಗಳು ನಮ್ಮ ಸುಖ ಹಾಗೂ ಸಂತೋಷಗಳಿಗೆ ಮೂಲ ಎನ್ನುತ್ತೇವೆಯೊ ಅದೇ ವಿಷಯಗಳು ಎಂದಾದರೊಂದು ದಿನ ನಮ್ಮ ಅದಃಪತನಕ್ಕೆ ನಾಂದಿಯಾಗುತ್ತವೆ.